ಶಾಸಕರನ್ನು ಕೂಡಿ ಹಾಕುತ್ತೇವೆ ಎಂದು ಹೆದರಿಸಿದ್ದರು. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ, ಕಮಲಾಪುರ, ಜೀವಣಗಿ, ಗೋಗಿ ರೋಡು, ಮಾರಗುತ್ತಿ ಕ್ರಾಸ್, ಸೊಂತ, ಚಂಟಾ ರೋಡು, ಅಲ್ಲಿಂದ ಆಳಂದ, ಮಟಕಿ, ನೀರಗುಡಿ ರೋಡು, ಹರ್ಜೂರಿ ಬಾರ್ಡರ್‌ನಿಂದ ಹೊದ್ಲೂರು, ನರಗುಂದ ರೋಡು, ಅಲ್ಲಿಂದ ಬಂಗರಗಾ ಕ್ರಾಸ್‌ನಿಂದ ಪೋತನಿಪುರದ ರೋಡು, ಇಂಥ ಹಲವಾರು ರೋಡುಗಳನ್ನು ಕಡೆಗಣಿಸಿದ್ದು, ಎಲ್ಲಾ ರೋಡುಗಳೂ ಹದಗೆಟ್ಟಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಕ್ಷೇತ್ರದಲ್ಲಿ ಯಾವ ಹಳ್ಳಿಗೆ ಹೋಗಬೇಕೆಂದರೂ, ನಾವು ಸಧ್ಯ ಅಲ್ಲಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ನಾನೊಬ್ಬನೇ ಅಲ್ಲ, ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಇದು ಅನ್ವಯವಾಗಬಹುದು. ರಸ್ತೆಗಳು ಬಹಳ ಹದಗೆಟ್ಟಿವೆ, ವಾಹನಗಳು ಓಡಾಡುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿ ಸರ್ಕಾರ ಕೂಡಲೇ ಈ ರೋಡುಗಳನ್ನು ಸರಿಪಡಿಸುವ ಕ್ರಮ ಕೈಗೊಳ್ಳಬೇಕು, ನಮ್ಮಂಥ ಮುಗ್ಧ ಶಾಸಕರು ಹಳ್ಳಿಗಳಿಗೆ ಹೋಗಲು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಹಳ್ಳಿ ರಸ್ತೆಗಳ ಕೆಲಸಗಳನ್ನು ಜಿಲ್ಲಾ ಪಂಚಾಯತ್, ಎಸ್.ಜೆ.ಆರ್.ವೈ; ಫುಡ್ ಫಾರ್ ವರ್ಕ್, ಅವುಗಳ ಮೂಲಕ ಕೆಲಸ ಮಾಡುತ್ತಿದ್ದೇವೆ. ಅವು ಯಾವುದೇ ಸ್ಟೇಟ್ ರಸ್ತೆಗಳಾಗಲೀ ಅಥವಾ ನ್ಯಾಷನಲ್ ಹೈವೇಗಳಾಗಲೀ ಸರ್ಕಾರ ಅದಕ್ಕೆ ಗಮನ ಕೊಡುತ್ತದೆ. ಆದರೆ ಇದು ಜಿಲ್ಲಾ ಪಂಚಾಯಿತಿ ರಸ್ತೆಗಳಾಗಿರುವುದರಿಂದ, ಹಳ್ಳಿ ಗಾಡಿನ ರಸ್ತೆಗಳಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ನೀವೂ ಸದಸ್ಯರಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ಏನು ಹಣ ಕೊಡುತ್ತಾರೆ, ಆ ಹಣವನ್ನು ಈ ರಸ್ತೆಗಳಿಗೆ ಹಾಕಿ ರಸ್ತೆಗಳನ್ನು ಮೂಡಿಸಬಹುದು. ಆ ಹಣ ಸಾಲದಿದ್ದರೆ, ಏನಾದರೂ ಅಗತ್ಯವಿದ್ದರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ ಎಂದು ನಾನು ಅವರಿಗೆ ಹೇಳಲು ಬಯಸುತ್ತೇನೆ.

27. ವಿಷಯ : ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹಿಸಿದ ಶುಲ್ಕವನ್ನು ರೇಷ್ಮೆ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸುವ ಬಗ್ಗೆ

ಶ್ರೀ ಆರ್. ಧ್ರುವನಾರಾಯಣ (ಸಂತೇಮರಹಳ್ಳಿ) : ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು, ರೀಲರ್‌ಗಳು, ಮೊಟ್ಟೆ ಉತ್ಪಾದಕರು, ನೇಕಾರರು ಇವರೆಲ್ಲರೂ ಬಹಳ ಸಂಕಷ್ಟದಲ್ಲಿದ್ದಾರೆ. ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಲೆಕ್ಟ್ ಮಾಡುವ ಶುಲ್ಕದಿಂದ ಬರುವ ಹಣ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ. 1979ರಿಂದ ಇದುವರೆಗೆ, ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ 246 ಕೋಟಿ ರೂಪಾಯಿಗಳ ಶುಲ್ಕ ಸಂಗ್ರಹಣೆಯಾಗಿದೆ. ಈ ರೀತಿ

ಸಂಗ್ರಹಣೆಯಾದಂಥ ಹಣವನ್ನು, ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ ಇಟ್ಟುಕೊಂಡು ತನ್ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಆ ಹಣವನ್ನು ವಿನಿಯೋಗ ಮಾಡಬೇಕು. ಅದರಲ್ಲಿ, ಮೊದಲನೆಯದಾಗಿ, ರೇಷ್ಮೆ ಗೂಡಿನ ಮಾರುಕಟ್ಟೆ ಅಥವಾ ರೇಷ್ಮೆ ವಿನಿಮಯ ಕೇಂದ್ರಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಬೇಕು. ಎರಡನೆಯದು, ರೇಷ್ಮೆ ಗೂಡಿನ ಮಾರುಕಟ್ಟೆ ಅಥವಾ ರೇಷ್ಮೆ ವಿನಿಮಯ ಕೇಂದ್ರಗಳಿಗೆ ಸೂಕ್ತ ಕಟ್ಟಡಗಳನ್ನು ಕಲ್ಪಿಸುವುದು ಮತ್ತು ರೇಷ್ಮೆ ಗೂಡಿಗೆ ಕನಿಷ್ಟ ಬೆಲೆ ನಿಗದಿ ಮಾಡುವುದು, ಈ ನಾಲ್ಕು ಕಾರ್ಯಕ್ರಮಗಳಿಗೆ ರೇಷ್ಮೆ ಕಾಯ್ದೆಯನ್ವಯ ಈ ಹಣವನ್ನು ವಿನಿಯೋಗ ಮಾಡಬೇಕು. ಇವತ್ತು, ಈ ಒಂದು ಕಾಯಿದೆಯನ್ನು ಉಲ್ಲಂಘಿಸಿ, ಈ ಹಣವನ್ನು ಸರ್ಕಾರ ನೇರ ಖಜಾನೆಗೆ ಹಾಕಿಕೊಂಡು, ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗವಾಗಲು ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲೇ ಇದ್ದಾರೆ, ನಾನು ಅವರ ಮೊರೆ ಹೋಗುತ್ತೇನೆ, ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹವಾಗುವ ಹಣವನ್ನು ಸರ್ಕಾರ ನೇರವಾಗಿ ಖಜಾನೆಗೆ ತೆಗೆದುಕೊಳ್ಳದೇ, ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ ಏನಿದೆ (ಪಿ.ಎಸ್.ಎಫ್.ಎ) (Price Stabilisation Fund Authority) ಇದರ ಮೂಲಕ ರೇಷ್ಮೆ ಅಭಿವೃದ್ಧಿಗಳಿಗೆ ಈ ಹಣವನ್ನು ವಿನಿಯೋಗ ಮಾಡಬೇಕು ಎಂದು ಸರ್ಕಾರದ ಮೊರೆ ಹೋಗುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಈ ಹಣವನ್ನು ನೇರವಾಗಿ ಖಜಾನೆಗೆ ಹಾಕಿಕೊಳ್ಳದೇ, ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಹಾಕಿಕೊಳ್ಳಬೇಕು ಎಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ಬಹಳ ನಿಜ. ವರ್ಷಕ್ಕೆ 15 ಕೋಟಿ ರೂಪಾಯಿಗಳಷ್ಟು ಬೆಲೆ ಸ್ಥಿರೀಕರಣ ಫಂಡನ್ನು ಗೂಡು ಮಾರುಕಟ್ಟೆಗಳಿಂದ ಕಲೆಕ್ಟ್ ಮಾಡುತ್ತಾರೆ. ಅದನ್ನು ಅವರು ಹೇಳಿದಂತೆ ನಾಲ್ಕು ವಿಷಯಗಳಿಗೆ ಉಪಯೋಗಿಸಬೇಕು ಎನ್ನುವುದಿದ್ದರೂ ಕೂಡ, ಇತ್ತೀಚಿನ ದಿನಗಳಲ್ಲಿ ಅದಕ್ಕೆ ಗಮನ ಕೊಟ್ಟಿಲ್ಲ. ಹಿಂದೆ, ರೇಷ್ಮೆ ಗೂಡಿನ ಬೆಲೆ ಕಡಿಮೆಯಾದಾಗ 10 ರೂಪಾಯಿಗಳ ಸಪೋರ್ಟ್ ಪ್ರೈಸನ್ನು ಅದರಿಂದ ಕೊಟ್ಟರು. ಉಳಿದಂಥ ಹಣ ಹಣಕಾಸಿನ ಖಾತೆಗೆ ಬಂದಿರುವುದಿಂದ, ಇದು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಸಮಸ್ಯೆಯೂ ಆಗಿರುವುದರಿಂದ ಹಾಗೂ ಇದು ಬಹಳ ಮುಖ್ಯವಾಗಿರುವುದರಿಂದ ಮೊನ್ನೆ ನಾನೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿ, ಅವರ ಜೊತೆ ಒಂದು ಮೀಟಿಂಗ್ ಮಾಡಿದಾಗ ಅವರು ಒಪ್ಪಿಕೊಂಡಿದ್ದಾರೆ. ಈ ವರ್ಷದಿಂದ ಬೆಲೆ ಸ್ಥಿರೀಕರಣ ಫಂಡನ್ನು ಆಯಾ ಜಿಲ್ಲೆಗಳಿಗೆ ಕೊಡತಕ್ಕದ್ದು ಎಂದು ಆಗಿದೆ. ರೀಲರ್ಸ್‌ಗೆ ತೊಂದರೆ ಇರಬಹುದು ಅಥವಾ ಬಿಲ್ಡಿಂಗಿನ ತೊಂದರೆ ಇರಬಹುದು ಅಥವಾ ರೈತ ಬೆಳೆದಂಥ ರೇಷ್ಮೆ ಗೂಡಿನ ಬೆಲೆ ಕಡಿಮೆಯಾದರೆ, ಇಂಥವುಗಳಿಗೆ ಆ ಹಣವನ್ನು ಕೊಡುವಂಥಾದ್ದನ್ನು ಮಾಡುತ್ತೇವೆ ಎನ್ನುವ ಮಾತನ್ನು ಈಗಾಗಲೇ ಸಂಬಂಧಪಟ್ಟ ಹಣಕಾಸಿನ ಇಲಾಖೆಯವರು ಹೇಳಿದ್ದಾರೆ. ಆದ್ದರಿಂದ,

ಈ ವರ್ಷದಿಂದ ಆ ಹಣ ನಮಗೇ ಬರುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಲು ಇಚ್ಛೆಪಡುತ್ತೇನೆ.

28. ವಿಷಯ : ಮಾಲೇಕಲ್ ತಿರುಪತಿಯಲ್ಲಿ ರಥೆಯಾತ್ರೆಯ ಸಂದರ್ಭದಲ್ಲಿ ಗೋಪುರ ಕುಸಿದು ಸತ್ತವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಹಾಸನ ಜಇಲ್ಲೆಯ ಆರಸೀಕೆರೆ ತಾಲ್ಲೂಕಿನಲ್ಲಿ ದಿನಾಂಕ 29–6–2004ರಂದು ಮಾಲೀಕಲ್ ತಿರುಪತಿಯಲ್ಲಿ ಬಹಳ ವೈಭವವಾದಂಥ ರಥಯಾತ್ರೆ ನಡೆಯುತ್ತಿತ್ತು. ಆ ಯಾತ್ರೆಯ ಸಮಯದಲ್ಲಿ ಸುಮಾರು ಒಂದೂವರೆ ಸಾವಿರ ಮೆಟ್ಟಿಲುಗಳ ಮೇಲಿರುವ ಹಳೆದ ಗೋಪುರ ಕುಸಿದು ಬಿದ್ದು ಹೋಗಿದ್ದು, ಈ ಘಟನೆಯಲ್ಲಿ 41 ಜನರಿಗೆ ಏಟು ಬಿದ್ದಿದ್ದು, ಮೂರು ಜನ ಸತ್ತು ಹೋಗಿರತಕ್ಕಂಥಾದ್ದು ಆಗಿದೆ. ಸತ್ತಿರುವ ಈ ಮೂವರಲ್ಲಿ ಒಬ್ಬರು ಕಡೂರು ತಾಲ್ಲೂಕಿನವರು, ಒಬ್ಬರು ತಿಪಟೂರು ತಾಲ್ಲೂಕಿನವರು, ಇನ್ನೊಬ್ಬರು ಅರಸೀಕೆರೆಯವರು. ಇದುವರೆಗೂ ಈ ಘಟನೆಗೆ ಸಂಬಂಧಿಸಿದಂತೆ ಪರಿಹಾರವನ್ನು ಕೊಟ್ಟಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೂ ತಂದಿದ್ದೇವೆ. ಗಾಯಗೊಂಡಿರುವವರಲ್ಲಿ ಸುಮಾರು 12 ಜನರಿಗೆ ಕೈ ಕಾಲುಗಳು ಮುರಿದಿವೆ. ಗಾಯಗೊಂಡಿರುವ ಬಾಕಿಯವರಿಗೆ ಸ್ವಲ್ಪ ಏಟು ಬಿದ್ದಿರತಕ್ಕಂಥಾದ್ದು ಆಗಿದೆ. ಸತ್ತಿರುವ ಈ ಮೂರು ಜನರ ಕುಟುಂಬಗಳಿಗೆ ಮತ್ತು ಗಾಯಗೊಂಡಿರುವವರಿಗೆ ಇವತ್ತಿನವರೆಗೆ ಏಕೆ ಪರಿಹಾರ ಕೊಟ್ಟಿಲ್ಲ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ನಂಜಾಮರಿ (ತಿಪಟೂರು) : ಸನ್ಮಾನ್ಯ ಅಧ್ಯಕ್ಷರೇ, ತಿಪಟೂರಿನಲ್ಲಿ ಅರಸೀಕೆರೆ–ಸಿರ್ಸಿ ಜಾತ್ರೆಯಲ್ಲಿ, ಜಾತ್ರೆಗೆ ಹೋದಂಥ ಜನ ಒಂದು ಮಂಟಪದಡಿಯಲ್ಲಿದ್ದಾಗ ಮಳೆ ಬಿದ್ದು, ಮಂಟಪ ಕುಸಿದು, ನನ್ನ ಕ್ಷೇತ್ರದಲ್ಲೂ ಸಹ ಜನ ಸತ್ತುಹೋಗಿದ್ದಾರೆ, ಸುಮಾರು 3–4 ಜನರಿಗೆ ಕೈಕಾಲು ಮುರಿದಿವೆ. ಅದಕ್ಕೆ ಇದುವರೆಗೂ ಪರಿಹಾರವನ್ನು ಕೊಟ್ಟಿಲ್ಲ ಎಂದು ನಮ್ಮ ಕ್ಷೇತ್ರದ ಜನ ಕೇಳುತ್ತಿದ್ದಾರೆ, ದಯವಿಟ್ಟು ಅದಕ್ಕೆ ಪರಿಹಾರ ಕೊಡಿಸಬೇಕು ಎಂದು ತಮ್ಮನ್ನು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಅದರ ಪೂರ್ತಿ ಡೀಟೈಲ್ಸ್ ಕೊಟ್ಟರೆ ಅದರ ಮೇಲೆ ಕ್ರಮವನ್ನು ಜರುಗಿಸುತ್ತೇವೆ.

29. ವಿಷಯ : ಪಶು ಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಮಾಡಿರುವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ. ಅವರಿಗೆ ಔಷಧಿ ಖರೀದಿ ಮಾಡುವುದಕ್ಕೆ ಹಣವೇ ಇಲ್ಲ. ಇರುವ ಸ್ವಲ್ಪ ದುಡ್ಡನ್ನೂ ಸಹ ಹೊಡೆದು ತಿಂದಿದ್ದಾರೆ. ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಯಾರಾದರೂ ಮಂತ್ರಿಗಳು ಇದ್ದರೆ